ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಭಾಂಗಣದಲ್ಲಿ ದಿನಾಂಕ 18-5-2013 ರಂದು ಜರುಗಿದ
**ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಹದಿನಾಲ್ಕನೇಯ ಸಭೆಯ ನಡುವಳಿಗಳು:**

**ಉಪಸ್ಥಿತರಿದ್ದ ಸದಸ್ಯರು:**

| | | |
|---|---|---|
| 1. | ಡಾ. ಬಿ.ವಿ. ಪಾಟೀಲ | ಅಧ್ಯಕ್ಷರು |
| 2. | ಶ್ರೀ ಜಿ. ತಿಮ್ಮನಗೌಡ ಪಾಟೀಲ್ | ಸದಸ್ಯರು |
| 3. | ಶ್ರೀ ಭೋಜನಗೌಡ | ಸದಸ್ಯರು |
| 4. | ಶ್ರೀ ವೆಂಕನಗೌಡ ಮಲ್ಕಾಪುರ | ಸದಸ್ಯರು |
| 5. | ಶ್ರೀ ಶಿವಪ್ಪ ಬಿ. ಬಲ್ಲಿದವ | ಸದಸ್ಯರು |
| 6. | ಶ್ರೀಮತಿ ಹೆಚ್.ಸಿ. ಆಶಾ ಶೇಷಾದ್ರಿ | ಸದಸ್ಯರು |
| 7. | ಶ್ರೀ ಶಂಕರಗೌಡ ಹರವಿ | ಸದಸ್ಯರು |
| 8. | ಡಾ. ಡಿ.ಪಿ. ಬಿರಾದಾರ | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹದಿನಾಲ್ಕನೇಯ ಸಭೆಗೆ ಸರ್ವಸದಸ್ಯರನ್ನು ಮಾನ್ಯ ಕುಲಪತಿಗಳು ಹಾಗೂ ಅಧ್ಯಕ್ಷರು ಸ್ವಾಗತ ಕೋರಿದರು. ತದನಂತರ, ಕಾರ್ಯಸೂಚಿಯ ವಿಷಯವಾರು ಪ್ರಕಾರ ಒಂದೊಂದಾಗಿ ಚರ್ಚಿಸಿ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| | |
|---|---|
| **ಅನುಕ್ರಮ ಸಂ: 1** | **ದಿನಾಂಕ 18-3-2013 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹದಿಮೂರನೇಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು ಮತ್ತು ಅವುಗಳ ಪ್ರಕಾರ ಕೈಗೊಂಡ ಕ್ರಮಗಳನ್ನು ಅನುಮೋದಿಸುವುದು** |

**ಠರಾವು:**

ಮಾನ್ಯ ವ್ಯವಸ್ಥಾಪನಾ ಮಂಡಳಿಯ ಹದಿಮೂರನೇಯ ಸಭೆಯ ನಡುವಳಿಕೆಗಳಲ್ಲಿಯ ಎಲ್ಲಾ ಅನುಕ್ರಮ ಸಂ.1 ರಿಂದ 20 ಹಾಗೂ ಹೆಚ್ಚುವರಿ ಅನುಕ್ರಮ ಸಂ.1 ರಿಂದ 4 ರ ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಲಾಯಿತು. ಅನುಕ್ರಮ ಸಂ.5 ಕ್ಕೆ ಸಂಬಂಧಿಸಿದಂತೆ ಇನ್ಸ್ಟ್ರೂಮೆಂಟೇಶನ್ ಇಂಜಿನಿಯರ್‌ಗಾಗಿ ಪದವಿಯ ಅವಶ್ಯಕತೆಯಿರುವುದರಿಂದ, ಕಿರಿಯ ಅಭಿಯಂತರ (ಕೃಷಿ) ಯ ಬದಲಾಗಿ ಹಿರಿಯ ಅಭಿಯಂತರ (ಕೃಷಿ) ಯ ಒಂದು ಹುದ್ದೆಯನ್ನು ಇನ್ಸ್ಟ್ರೂಮೆಂಟೇಶನ್ ಇಂಜಿನಿಯರ್ ಎಂದು ಪರಿವರ್ತಿಸಲು ಘನ ವೇದಿಕೆಯು ಒಪ್ಪಿಗೆ ಸೂಚಿಸಿರುತ್ತದೆ. ಮುಂದುವರೆದು, ಅವುಗಳ ಪ್ರಕಾರ ಕೈಕೊಂಡ ಕ್ರಮಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

| | |
|---|---|
| **ಅನುಕ್ರಮ ಸಂ: 2** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2013-2014 ನೇ ಸಾಲಿನ ಆಯವ್ಯಯ ಅಂದಾಜು ಮತ್ತು 2012-2013 ನೇ ಸಾಲಿನ ಪರಿಷ್ಕೃತ ಆಯವ್ಯಯಕ್ಕೆ ಅನುಮೋದನೆ ಕುರಿತು.** |

**ಠರಾವು:**

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2013-2014 ನೇ ಸಾಲಿನ ಆಯವ್ಯಯ ಅಂದಾಜು ಮತ್ತು 2012-2013 ನೇ ಸಾಲಿನ ಪರಿಷ್ಕೃತ ಆಯವ್ಯಯವನ್ನು ಬಳಸಿಕೊಳ್ಳಲು ಸರ್ವಾನುಮತದಿಂದ ಅನುಮೋದನೆ ನೀಡಿತು.

(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)

| | |
|---|---|
| **ಅನುಕ್ರಮ ಸಂ: 3** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ 2010-11 ನೇ ಸಾಲಿನ ವಾರ್ಷಿಕ ಖರ್ಚು ವೆಚ್ಚಗಳಿಗೆ ಅನುಮೋದನೆ ಕುರಿತು.** |

**ಠರಾವು:**

ಹಣಕಾಸು ನಿಯಂತ್ರಣಾಧಿಕಾರಿಗಳು, ಕೃವಿವಿ ರಾಯಚೂರು ಅವರು ವಿಶ್ವವಿದ್ಯಾಲಯದ 2010-11 ನೇ ಸಾಲಿನ ವಾರ್ಷಿಕ ಖರ್ಚು ವೆಚ್ಚಗಳ ವಿವರಗಳನ್ನು ತಿಳಿಸುತ್ತಾ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಸ್ಪಷ್ಟೀಕರಣಗಳನ್ನು ನೀಡಿದರು. ಅಂತಿಮವಾಗಿ, ಘನ ವೇದಿಕೆಯು 2010-11 ನೇ ಸಾಲಿನ ವಾರ್ಷಿಕ ಖರ್ಚು ವೆಚ್ಚಗಳಿಗೆ ಅನುಮೋದನೆ ನೀಡುತ್ತಾ ಅವುಗಳನ್ನು ಸರಕಾರದ ಲೆಕ್ಕ ಪರಿಶೋಧನೆಗಾಗಿ ಸಲ್ಲಿಸಲು ಅನುಮೋದಿಸಿತು.

(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು)

| ಅನುಕ್ರಮ ಸಂ: 4 | ಅಂತರರಾಷ್ಟ್ರೀಯ ತರಬೇತಿ / ಕಾರ್ಯಾಗಾರಗಳಲ್ಲಿ / ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಪ್ರಬಂಧಗಳನ್ನು ಮಂಡಿಸಲು / ಪ್ರಯೋಗಾಲಯಗಳಿಗೆ ಭೇಟಿ ನೀಡಲು ಶಿಕ್ಷಕರು /ವಿಜ್ಞಾನಿಗಳಿಗೆ ವಿದೇಶಗಳಿಗೆ ಪ್ರತಿನಿಯೋಜನೆ ಮಾಡುವ ಕುರಿತು. |
|---|---|

**ಠರಾವು:**

2013–'14 ನೇ ಸಾಲಿಗೆ ಕೃವಿವಿ ಅನುದಾನದಿಂದ ಪ್ರತಿಯೊಬ್ಬರಿಗೆ ಐದು ಲಕ್ಷ ರೂಪಾಯಿಗಳ ಧನಸಹಾಯದೊಂದಿಗೆ ನಾಲ್ಕು ಶಿಕ್ಷಕರುಗಳು ಡಾ. ರಾಜೇಶ್ ಎನ್.ಎಲ್., ಡಾ. ವೀರೇಶ್ ಎಚ್. ಡಾ. ಯು.ಕೆ. ಶಾನವಾಡ ಮತ್ತು ಡಾ. ಎ.ಜಿ. ಶ್ರೀನಿವಾಸ ಇವರುಗಳಿಗೆ 3 ತಿಂಗಳ ಅವಧಿಯ ಅಂತರರಾಷ್ಟ್ರೀಯ ತರಬೇತಿಗಳಲ್ಲಿ ಭಾಗವಹಿಸಲು ವಿಶ್ವವಿದ್ಯಾಲಯವು ಕೈಗೊಂಡ ತೀರ್ಮಾನಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಅದರಂತೆ, ಡಾ. ಬಿ.ವಿ. ಪಾಟೀಲ, ಡಾ. ಎಮ್.ಕೆ. ನಾಯಕ್, ಡಾ. ರಾಕೇಶ್ ಸಿ. ಮಠದ್ ಮತ್ತು ಡಾ. ಎಸ್.ಕೆ. ಮೇಟಿ ಇವರುಗಳಿಗೆ ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ 2013–'14 ನೇ ಸಾಲಿಗೆ ಪ್ರತಿಯೊಬ್ಬರಿಗೆ ರೂ. 1.00 ಲಕ್ಷಗಳ ಕೃವಿವಿ ಅನುದಾನದೊಂದಿಗೆ ಭಾಗವಹಿಸಲು ವಿಶ್ವವಿದ್ಯಾಲಯವು ಕೈಗೊಂಡ ತೀರ್ಮಾನಕ್ಕೆ ಸಹ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಮುಂದುವರೆದು, ಡಾ. ಬಿ.ವಿ. ಪಾಟೀಲ, ಮಾನ್ಯ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ ರಾಯಚೂರು ಅವರನ್ನು ಭಾರತೀಯ ಕೃಷಿ ಅನುಸಂಧಾನ ಪರಿಷತ್ತು ನವದೆಹಲಿಯು ಚೀನಾದಲ್ಲಿಯ ಕೃಷಿ ಶಿಕ್ಷಣ ಪದ್ಧತಿಯನ್ನು ಅಧ್ಯಯನ ಮಾಡಲು ರಚಿಸಿದ ಸಮಿತಿಯ ಸದಸ್ಯರೆಂದು ಕೃವಿವಿಗೆ ಆರ್ಥಿಕ ಹೊರೆ ಇಲ್ಲದಂತೆ ಚೀನಾ ಗೆ ಭೇಟಿನೀಡಿದ್ದನ್ನು ಸಹ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

| ಅನುಕ್ರಮ ಸಂ: 5 | ನೈಸರ್ಗಿಕ ಆಕಳು ಕೃಷಿ ಯೋಜನೆಯ ಬಗ್ಗೆ ಅಧ್ಯಕ್ಷರ ವರದಿ ಮರು–ಸಲ್ಲಿಸುವ ಕುರಿತು. |
|---|---|

**ಠರಾವು:**

ವಿಸ್ತೃತ ಚರ್ಚೆಯ ನಂತರ, ಸದರಿ ಸಮಿತಿಯ ಮೂವರು ಸದಸ್ಯರು ವಿವರವಾದ ವರದಿ ಸಲ್ಲಿಸಲು ಮತ್ತು ಅದನ್ನು ಮುಂದಿನ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಮಂಡಿಸಲು ಕೇಳಿಕೊಂಡರು. ಪರಿಕರಗಳನ್ನು ವಿಜ್ಞಾನಿಗಳು ತೃಪ್ತಿಕರವಾಗಿ ವಿತರಿಸಿರುವುದಾಗಿ ಸದರಿ ಸಮಿತಿಯ ಅಧ್ಯಕ್ಷರು ತಿಳಿಸಿದರು. ಆದಾಗ್ಯೂ, ವೈಯಕ್ತಿಕವಾಗಿ ರೈತರುಗಳ ಕಾಳಜಿಯಿಲ್ಲದ್ದರಿಂದ ಆಕಳುಗಳ ಆರೋಗ್ಯದಲ್ಲಿ ಏರುಪೇರಾಗಿರುತ್ತದೆ. ಹೀಗಾಗಿ ಸಮಿತಿಯ ಅಧ್ಯಕ್ಷರು ಸದರಿ ವರದಿಯನ್ನು ಅಂತಿಮಗೊಳಿಸಲು ವಿನಂತಿಸಿಕೊಂಡಿರುತ್ತಾರೆ. ಕೊನೇಯದಾಗಿ, ಸದರಿ ವಿಷಯವನ್ನು ಚರ್ಚಿಸಲು ಮತ್ತು ನಿರ್ಧರಿಸಲು ಮುಂದಿನ ವ್ಯವಸ್ಥಾಪನಾ ಮಂಡಳಿಯ ಸಭೆಯಲ್ಲಿ ಮಂಡಿಸುವಂತೆ ತೀರ್ಮಾನಿಸಲಾಯಿತು

(ಕ್ರಮ : ಕುಲಸಚಿವರು)

| ಅನುಕ್ರಮ ಸಂ: 6 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು. |
|---|---|

**ಠರಾವು:**

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕಡಿಮೆ ದರ ನಮೂದಿಸಿದ ಬಿಡ್ದುದಾರರಿಂದ ಕೈಗೊಳ್ಳುವ ಪ್ರಸ್ತಾವನೆಗೆ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕಾರ್ಯನಿರ್ವಾಹಕ ಅಭಯಂತರರು)

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ /– 18–5–2013 | ಸಹಿ /– 18–5–2013 |
|---|---|
| **(ಬಿ.ವಿ. ಪಾಟೀಲ)** | **(ಡಿ.ಪಿ. ಬಿರಾದಾರ)** |
| ಕುಲಪತಿಗಳು ಹಾಗೂ ಅಧ್ಯಕ್ಷರು | ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ |
| ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಡಿ.ಪಿ. ಬಿರಾದಾರ)**

ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ

ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.